ಈ ಕೆಳಕಂಡಂತಿದೆ.

1.	'ಎ' ವರ್ಗ	-	82
2.	'ಬಿ' ವರ್ಗ	-	67
3.	'ಸಿ' ವರ್ಗ	-	71
	ಒಟ್ಟು		**220**

ಇ) 1996-97ನೇ ಸಾಲಿನಲ್ಲಿ ಮಾಡಲಾಗಿರುವ ಅವಧಿ ಪೂರ್ವ ವರ್ಗಾವಣೆಗಳ ವಿವರ ಈ ಕೆಳಕಂಡಂತಿದೆ:

1.	'ಎ' ವರ್ಗ	-	66
2.	'ಬಿ' ವರ್ಗ	-	42
3.	'ಸಿ' ವರ್ಗ	-	27
	ಒಟ್ಟು		**135**

ಈ) 1996-97ನೇ ಸಾಲಿನಲ್ಲಿ ಮಾಡಲಾಗಿರುವ ಅವಧಿ ನಂತರದ ವರ್ಗಾವಣೆಗಳ ವಿವರಗಳು ಈ ಕೆಳಕಂಡಂತಿದೆ :

1.	'ಎ' ವರ್ಗ	-	16
2.	'ಬಿ' ವರ್ಗ	-	25
3.	'ಸಿ' ವರ್ಗ	-	44
	ಒಟ್ಟು		**85**

ರಾಜ್ಯದಲ್ಲಿ ಖಾಲಿ ಇರುವ ದಂತ ವೈದ್ಯರ ಖಾಲಿ ಹುದ್ದೆಗಳು

1542 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದಂತ ವೈದ್ಯರ ಎಷ್ಟು ಹುದ್ದೆಗಳು ಖಾಲಿ ಇವೆ.?

ಆ) ಖಾಲಿ ಹುದ್ದೆಗಳಲ್ಲಿ ಭರ್ತಿ ಮಾಡಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಇ) ದಂತ ವೈದ್ಯರಿಲ್ಲದ ಸರ್ಕಾರಿ ಆಸ್ಪತ್ರೆಗಳಿಗೂ ದಂತ ಚಿಕಿತ್ಸೆಯ ಉಪಕರಣಗಳನ್ನು ಸರಬರಾಜು ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ?

ಡಾ || ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 97

ಆ) ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ.

ಕಾನೂನು ಕಾಲೇಜುಗಳಿಗೆ ಯು.ಸಿ.ಜಿ ವೇತನ ವಿಸ್ತರಣೆ

1543 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಲೇಜು ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಬರುವ ಅನುದಾನಿತ ಕಾನೂನು ಕಾಲೇಜುಗಳಿಗೆ 1986ರ ಯುಜಿಸಿ ವೇತನ ಅನ್ವಯವಾಗುವುದೆ?

ಆ) ಹಾಗಿದ್ದರೆ, ಇದುವರೆವಿಗೂ ಈ ಕಾಲೇಜುಗಳಿಗೆ ವಿಸ್ತರಣೆ ಮಾಡದಿರಲು ಕಾರಣಗಳೇನು ?

ಇ) ಅನ್ವಯವಾಗದಿದ್ದರೆ ಕೇವಲ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಶಿಕ್ಷಣ ಕಾಲೇಜುಗಳಿಗೆ ಮಾತ್ರ ವಿಸ್ತರಿಸಿ, ಕಾನೂನು ಕಾಲೇಜುಗಳನ್ನು ಯುಜಿಸಿ ವೇತನ ವ್ಯಾಪ್ತಿಗೆ ತರದೇ ಇರುವ ತಾರತಮ್ಯದ ಧೋರಣೆ ಏಕೆ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಈ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಯುಜಿಸಿ ಯೊಂದಿಗೆ ಸಮಾಲೋಚಿಸಲಾಗುತ್ತಿದೆ. ಆದ್ದರಿಂದ ವಿಳಂಬವಾಗಿದೆ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹೊಸ ವೈದ್ಯಕೀಯ ಕಾಲೇಜುಗಳಿಗೆ ಪರವಾನಿಗೆ

1545 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳು ಎಷ್ಟು? ಈ ಕಾಲೇಜುಗಳು ಸಮರ್ಪಕವಾಗಿ ನಡೆಯುತ್ತಿವೆಯೇ? ಹಾಗೂ ಅಗತ್ಯ ಸೌಲಭ್ಯಗಳನ್ನು ಹೊಂದಿದೆಯೇ?

ಆ) ಹೊಸ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜು ಮಂಜೂರಾತಿಗಾಗಿ